**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ರಾಣೇಬೆನ್ನೂರು.**
**ಸಿ.ಸಿ.ನಂಬ್ರ: 1053/2020**

D.W -1

**ಸಾಕ್ಷಿದಾರರ ಹೆಸರು** : ಹನುಮಂತೇಗೌಡ ರಾಮಲಿಂಗಣ್ಣನವರ
**ತಂದೆಯ ಹೆಸರು** : ಬಸನಗೌಡ
**ವಯಸ್ಸು** : 45 ವರ್ಷ
**ಉದ್ಯೋಗ** : ಏನೂ ಇಲ್ಲ
**ವಾಸ** : ರಾಣೆಬೆನ್ನೂರು

**ದಿನಾಂಕ: 13-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಪಿ.ಆರ್.ಕೆ. ವಕೀಲರಿಂದ**

ನನಗೆ ಫಿರ್ಯಾದಿ ಸಂಸ್ಥೆಯ ಮಾಲೀಕರಾದ ಬಸವರಾಜ ಈತ ಗೊತ್ತು. ನಾನು ಫಿರ್ಯಾದಿ ಸಂಸ್ಥೆಯಿಂದ ಯಾವುದೇ ಜೋಳವನ್ನು ಖರೀದಿ ಮಾಡಿರುವುದಿಲ್ಲ. ಪ್ರತಿ ಕ್ವಿಂಟಾಲ್ ಗೆ ರೂ.2400/- ಗಳಂತೆ 500 ಕ್ವಿಂಟಾಲ್ ಅವರ ಕಡೆಯಿಂದ ಖರೀದಿ ಮಾಡಿರುತ್ತೇನೆ ಎಂದು ಮತ್ತು ಆ ಕುರಿತು ಬಿಲ್ ರಶೀದಿ ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಾರೆ. ನಾನು ಫಿರ್ಯಾದಿ ಕಡೆಯಿಂದ ಸದ್ರಿ ವಸ್ತುಗಳನ್ನು ಖರೀದಿಸಿರುತ್ತೇನೆ ಎಂದರೆ ಸರಿ ಅಲ್ಲ. ದಿನಾಂಕ 25-07-2019 ರಂದು ಅದರ ಹಣದ ಮರುಪಾವತಿಗಾಗಿ ಚೆಕ್ ಸಂಖ್ಯೆ 002631 ರೂ.12 ಲಕ್ಷಕ್ಕೆ ಚೆಕ್ ಕೊಟ್ಟಿರುತ್ತೇನೆ ಎಂದು ಸುಳ್ಳು ವಾದ ಮಂಡಿಸಿರುತ್ತಾರೆ. ಸದ್ರಿ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದಾಗ ಅದು ಅಮಾನ್ಯಗೊಂಡಿತ್ತು ಎಂದು ಹೇಳುತ್ತಾರೆ ಎಂದರೆ ನಾನು ಚೆಕ್ಕು ಕೊಟ್ಟಿಲ್ಲ ಎಂದು ಹೇಳುತ್ತಾರೆ. ನನ್ನ ಖಾತೆ ದಿನಾಂಕ 14-06-2019 ರಂದು ನನ್ನ ಖಾತೆ ಮುಚ್ಚಲ್ಪಟ್ಟಿತ್ತು ಅದು ನಾನು ಕೊಟ್ಟ ವಿನಂತಿ ಮೇರೆಗೆ ಸದ್ರಿ ಖಾತೆ ಮುಚ್ಚಲ್ಪಟ್ಟಿತ್ತು. ಖಾತೆಯಲ್ಲಿ ಕೂಡ ಸಾಕಷ್ಟು ಹಣ ಇರಲಿಲ್ಲ ಎಂದು ಸುಳ್ಳು ಹೇಳುತ್ತಾರೆ. ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇರದೇ ಇದ್ದರೂ ಸಹ ಮೋಸ ಮಾಡುವ ಉದ್ದೇಶಕ್ಕಾಗಿ ಚೆಕ್ಕನ್ನು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಾರೆ.

ನನಗೆ ಯಾವುದೇ ಬೇಡಿಕೆ ನೊಟೀಸ್ ಬಂದಿಲ್ಲ. ಸದ್ರಿ ನನಗೆ ಫಿರ್ಯಾದಿ

ಸಂಸ್ಥೆಯಿಂದ ಯಾವುದೇ ನೋಟೀಸ್ ಬಂದಿಲ್ಲ ಮತ್ತು ಅದು ನನಗೆ ಜಾರಿ ಕೂಡ ಆಗಿರುವುದಿಲ್ಲ.

2019 ರ ಮೇ ಮತ್ತು ಜೂನ್ ಮೊದಲನೇ ವಾರದಲ್ಲಿ ಗ್ರಾಹಕರು ಬಂದು ನಮ್ಮ ಅಂಗಡಿಯಲ್ಲಿ ಗದ್ದಲ ಮಾಡಿದರು. ಮೊದಲು ನಾನು ನಮ್ಮ ಸಂಘಕ್ಕೆ ದೂರು ದಾಖಲಿಸಿರುತ್ತೇನೆ. ಇದಾದ ನಂತರ ಮತ್ತೆ ನನ್ನ ಅಂಗಡಿಗೆ ಬಂದು ಚೆಕ್ ಬುಕ್ಕುಗಳು ಖಾತೆ ಖರೀದಿ ಕಂಪ್ಯೂಟರ್ ತೆಗೆದುಕೊಂಡು ಹೋಗಿರುತ್ತಾರೆ. ಇದಾದ ನಂತರ ನಾನು ಪೊಲೀಸ್ ಠಾಣೆಗೆ ದೂರು ಕೊಡಲು ಹೋಗಿದ್ದೆ. ಆಗ ಡಿವೈಎಸ್‌ಪಿ ಇವರು 9 ಜನ ನಮ್ಮ ಸಂಘದ ಕಮಿಟಿಯವರನ್ನು ಕರೆಸಿದ್ದರು. ನಾವು 3 ಆಸ್ತಿಗಳ ದಾಖಲೆಯನ್ನು ಕೊಟ್ಟಿದ್ದು ಅದರಲ್ಲಿ ಒಂದು ಹಿರೇಕೆರೂರಿನ ಗೋಡೌನ್ ರಾಣೆಬೆನ್ನೂರು ಹತ್ತಿರ ಒಂದು ಮಳಿಗೆ ಹಾಗೂ 9.5 ಗುಂಟೆ ಜಾಗ ಕೊಟ್ಟಿದ್ದೆವು. ದಿನಾಂಕ 14-06-2019 ರಂದು ಸಂಘಕ್ಕೆ ನನಗೆ ನಷ್ಟ ಆಗಿದೆ ಎಂದು ತಿಳಿಸಿದ್ದೆ. ಅದರಲ್ಲಿ ನಾನು ನನ್ನ ಆಸ್ತಿ ಮಾರಾಟ ಮಾಡಿ ಸದ್ರಿ ಹಣವನ್ನು ಮರಳಿ ಕೊಡಿ ಎಂದು ನಾನು ಕೇಳಿಕೊಂಡಿದ್ದೆ. ಆ ಕುರಿತು ನಾನು ಡಿವೈಎಸ್‌ಪಿ ಇವರಿಗೆ ದೂರು ಕೊಡಲು ಹೋದಾಗ ಈ ವಿಷಯ ತಿಳಿಸಿರುತ್ತೇನೆ.

ನಮ್ಮ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಡಿವೈಎಸ್‌ಪಿ ಇವರು ಸದ್ರಿ ಆಸ್ತಿಗಳನ್ನು ಮಾರಾಟ ಮಾಡಿ ಹಣವನ್ನು ಸಂದಾಯ ಮಾಡಲು ತಿಳಿಸಿದ್ದು ಮತ್ತು ನಮ್ಮ ಸಂಸ್ಥೆಯಿಂದ ಪಡೆದಿದ್ದ ಚೆಕ್ಕುಗಳನ್ನು ಮರಳಿ ಕೊಡಲು ಸೂಚನೆ ನೀಡಿದ್ದರು. ಅದರಲ್ಲಿ ಕೆಲವು ಜನ ಮರಳಿ ಸದ್ರಿ ಚೆಕ್ಕುಗಳನ್ನು ನೀಡಿದ್ದರು. ಇನ್ನೂ ಕೆಲವು ಜನ ಮರಳಿ ಕೊಟ್ಟಿರಲಿಲ್ಲ. ಆ ಸಮಯದಲ್ಲಿ ಪಡೆದ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ದುರುಪಯೋಗಪಡಿಸಿಕೊಂಡ ಚೆಕ್ಕುಗಳ ಪೈಕಿ ಇದೂ ಒಂದು ಚೆಕ್ಕಾಗಿರುತ್ತದೆ. ನಮ್ಮ ಸಂಸ್ಥೆ ಕಂಪ್ಯೂಟರ್, ಖಾತೆಗೆ ಸಂಬಂಧಿಸಿದ ಇತರ ದಾಖಲೆಗಳು ಈಗಲೂ ನಮ್ಮ ಸಂಘದ ವಶದಲ್ಲಿ ಇರುತ್ತವೆ. ಫಿರ್ಯಾದಿ ಸಂಸ್ಥೆಗೆ ಕೊಡಬೇಕಾದ ಬಾಕಿ ಯಾವುದೂ ಇರುವುದಿಲ್ಲ.

ನಾನು ಯೂನಿಯನ್ ಬ್ಯಾಂಕ್, ಆ್ಯಕ್ಸಿಸ್ ಬ್ಯಾಂಕ್ ಮತ್ತು ಕಾರ್ಪೋರೇಷನ್ ಬ್ಯಾಂಕಿಗೆ ಚೆಕ್ಕು ಕಳೆದು ಹೋದ ಬಗ್ಗೆ ತಿಳಿಸಿರುತ್ತೇನೆ. ಫಿರ್ಯಾದಿದಾರರು ನಮ್ಮ ಸಂಘಕ್ಕೆ ಹೋಗಿ ಹಣ ಕೊಡುವುದು ಬಾಕಿ ಇದೆ ಎಂದು ಕೇಳಿಲ್ಲ. ಫಿರ್ಯಾದಿದಾರರು ಅವರಿಗೆ ಬರತಕ್ಕ ಹಣ ಬಾಕಿ ಇದೆ ಎಂದು ಸಂಘಕ್ಕೆ ಅರ್ಜಿ ಕೊಟ್ಟಿಲ್ಲ. ನಾನು ಯಾವುದೇ ಮೆಕ್ಕೆಜೋಳ ಖರೀದಿ ಮಾಡಿಲ್ಲ ಚೆಕ್ಕನ್ನು ಕೊಟ್ಟಿರುವುದಿಲ್ಲ ಕಾರಣ ನಿರಪರಾಧಿ ಇದ್ದು

ಈ ಫಿರ್ಯಾದಿಯನ್ನು ವಜಾ ಮಾಡಲು ವಿನಂತಿ ಅದೆ.

ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರು.**

**ಸಾಕ್ಷಿದಾರರ ಸಹಿಃ**